ಅದನ್ನು ನೋಡಿ ಅಂತಿಮವಾದಂತಹ ವರದಿಯು ಸರ್ಕಾರದ ಮುಂದೆ ಬರಬೇಕೆನ್ನುವಂತಹ ಸೂಚನೆಯನ್ನು ನಾನು ಇವತ್ತೇ ಕೊಡುತ್ತೇನೆ.

ಅಧ್ಯಕ್ಷರು:– ಆಯಿತು. ನೀವು ನೀರನ್ನು ತೆಗೆದುಕೊಂಡು ಬಾಕಿಯವರನ್ನು ಮುಳುಗಿಸುತ್ತೀರಿ. ಮಾನ್ಯ ಸಚಿವರೆ, ಅವರನ್ನು ಸ್ಥಳಾಂತರಗೊಳಿಸುವುದರ ಜೊತೆಗೆ ಅವರಿಗೆ ಪುನರ್ ವಸತಿಯನ್ನು ಕಲ್ಪಿಸುವುದರ ಬಗ್ಗೆ ತಾವು ವಿಶೇಷವಾದ ಗಮನವನ್ನು ಕೊಡಿ. ಆ ಪ್ರದೇಶದಲ್ಲಿರುವಂತಹ ಹಳ್ಳಿಗಳು ಮುಳುಗಡೆಯಾಗುತ್ತಿರುವುದರಿಂದ ಅಲ್ಲಿರುವ ಜನರು ಸಾಯುತ್ತಿದ್ದಾರೆ. ಮಾನ್ಯ ಚಲುವರಾಯಸ್ವಾಮಿಯವರೆ, ತಾವು ಕೇಳಿ.

3. ವಿಷಯ: ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ

ಶ್ರೀ ಎನ್. ಚಲುವರಾಯಸ್ವಾಮಿ (ನಾಗಮಂಗಲ):– ಮಾನ್ಯ ಅಧ್ಯಕ್ಷರೆ, ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕು ಆಸ್ಪತ್ರೆಯಲ್ಲಿ ಅಗತ್ಯ ವೈದ್ಯರ ಹುದ್ದೆಗಳನ್ನು ಕೌನ್ಸಿಲಿಂಗ್ ವರ್ಗಾವಣೆ ನಿಮಿತ್ತ ಖಾಲಿ ಬಿಟ್ಟಿದ್ದು ಇದರಿಂದ ಸಾರ್ವಜನಿಕರಿಗೆ ತೊಂದರೆಯುಂಟಾಗುತ್ತಿರುವುದರಿಂದ ಸದರಿ ಪದ್ಧತಿಯನ್ನು ರದ್ದುಪಡಿಸಿ ಈಗಾಗಲೇ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ,.

ಸಾರ್ವಜನಿಕ ಆಸ್ಪತ್ರೆ ನಾಗಮಂಗಲ ಮಂಡ್ಯ ಜಿಲ್ಲೆ ಇಲ್ಲಿ 11 ತಜ್ಞ ವೈದ್ಯರ ಮತ್ತು 2 ದಂತ ವೈದ್ಯರ ಹುದ್ದೆ ಮಂಜೂರಾಗಿದ್ದು, 09 ತಜ್ಞ ವೈದ್ಯರುಗಳು ಮತ್ತು 2 ದಂತ ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದರು. ಈ ಪೈಕಿ ಮುಖ್ಯ ವೈದ್ಯಾಧಿಕಾರಿ ಮತ್ತು ನೇತ್ರ ತಜ್ಞರ ಹುದ್ದೆಗಳು ಮಾತ್ರ ಖಾಲಿ ಇತ್ತು.

ಹಾಲಿ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ತಜ್ಞರ ಪೈಕಿ ಮಕ್ಕಳ ತಜ್ಞರು ಮತ್ತು ಫಿಜಿಷಿಯನ್ (ಜನರಲ್ ಮೆಡಿಸನ್) ತಜ್ಞರು ಸಾತ್ನಕೋತ್ತರ ಪದವಿಯಲ್ಲಿ ಅನುತ್ತೀರ್ಣರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರಿಂದ, ಸದರಿ ಹುದ್ದೆಯಲ್ಲಿ ಕಾರ್ಯನಿರ್ವಹಿಸಲು ಅರ್ಹತೆ ಇಲ್ಲದಿರುವುದರಿಂದ, ಮಿಸ್ ಮ್ಯಾಚ್ ಅಡಿಯಲ್ಲಿ ಇವರುಗಳನ್ನು ಅವರ ವಿದ್ಯಾರ್ಹತೆಗೆ ಅನುಗುಣವಾದ ಸ್ಥಳಗಳಿಗೆ ವರ್ಗ ಮಾಡಬೇಕಾಗಿದ್ದು, ಸದರಿ ವೈದ್ಯರುಗಳು ಕ್ರಮವಾಗಿ ಸಮುದಾಯ ಆರೋಗ್ಯ ಕೇಂದ್ರ ಬಿಂಡಿಗನವಿಲೆ, ಮಂಡ್ಯ ಜಿಲ್ಲೆ ಮತ್ತು ಸಮುದಾಯ ಆರೋಗ್ಯ ಕೇಂದ್ರ ಬೇಲೂರು, ಹಾಸನ ಜಿಲ್ಲೆ ಇಲ್ಲಿಗೆ ದಿನಾಂಕ: 20/06/2014 ರಂದು ನಡೆದ ಮಿಸ್ ಮ್ಯಾಚ್ ಕೌನ್ಸಿಲಿಂಗ್‌ನಲ್ಲಿ ಸ್ಥಳ ಆಯ್ಕೆ ಮಾಡಿಕೊಂಡಿರುತ್ತಾರೆ.

ರೇಡಿಯೋಥೆರಪಿ ಮತ್ತು ಎಂ.ಡಿ.ಸೈಕ್ಯಾಟ್ರಿ ತಜ್ಞತೆ ಹೊಂದಿದ ವೈದ್ಯರು ಸದರಿ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ಸದರಿ ತಜ್ಞತೆಯ ಹುದ್ದೆಯು ಸದರಿ ಆಸ್ಪತ್ರೆಯಲ್ಲಿ ಮಂಜೂರಾಗಿರುವುದಿಲ್ಲ. ಇವರುಗಳನ್ನು ಅವರ ವಿದ್ಯಾರ್ಹತೆಗೆ ಅನುಗುಣವಾದ ಹಾಗೂ ತಜ್ಞತೆಯ ಹುದ್ದೆ ಮಂಜೂರಾದ ಆಸ್ಪತ್ರೆಗಳಿಗೆ ದಿನಾಂಕ: 20/06/2014ರಂದು ನಡೆದ ಮಿಸ್ ಮ್ಯಾಚ್ ಕೌನ್ಸಿಲಿಂಗ್‌ನಲ್ಲಿ ಹಾಜರಾಗಿ ಕ್ರಮವಾಗಿ ಸಾರ್ವಜನಿಕ ಆಸ್ಪತ್ರೆ, ಬೇಲೂರು, ಹಾಸನ ಜಿಲ್ಲೆ ಮತ್ತು ಜಿಲ್ಲಾ ಆಸ್ಪತ್ರೆ ತುಮಕೂರು ಇಲ್ಲಿ ಖಾಲಿ ಇರುವ ಹುದ್ದೆಗಳಿಗೆ ಆಯ್ಕೆ ಮಾಡಿಕೊಂಡಿರುವರು. ಈ ರೀತಿ ಸಾರ್ವಜನಿಕ ಆಸ್ಪತ್ರೆ ನಾಗಮಂಗಲ ಮಂಡ್ಯ ಜಿಲ್ಲೆ ಇಲ್ಲಿ 4 ತಜ್ಞರು ಖಾಲಿಯಾಗಿರುತ್ತಾರೆ.

ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು (ವೈದ್ಯಾಧಿಕಾರಿಗಳು ಮತ್ತು ಇತರೆ ಸಿಬ್ಬಂದಿಗಳ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ ನಿಯಮಗಳು 2012) ಸರ್ಕಾರಿ ಆದೇಶ ಸಂಖ್ಯೆ: ಆಕುಕ 332 ಹೆಚ್‌ಎಸ್‌ಹೆಚ್ 2012 ದಿನಾಂಕ: 19/02/2013ರ ನಿಯಮ 2ರ ಪ್ರಕಾರ ಆಡಳಿತಾತ್ಮಕ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಸರ್ಕಾರಿ ಆಸ್ಪತ್ರೆಗಳಲ್ಲಿ ತಜ್ಞ ವೈದ್ಯರುಗಳ ಹುದ್ದೆಯನ್ನು ಸಮಾನವಾಗಿ ಭರ್ತಿಮಾಡಲು ಕ್ರಮವಹಿಸುವ ನಿಟ್ಟಿನಲ್ಲಿ

ಆಸ್ಪತ್ರೆಯಲ್ಲಿ ಮಂಜೂರಾದ ಹುದ್ದೆಗಳ ಪೈಕಿ ಶೇಕಡ 50ಕ್ಕಿಂತ ಕಡಿಮೆ ಖಾಲಿ ಇರುವ ಆಸ್ಪತ್ರೆಗಳಿಗೆ ಮಾತ್ರ ತಜ್ಞರ ಹುದ್ದೆಗಳನ್ನು ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಮಾಡಬಹುದಾಗಿದೆ.

ಖಾಲಿ ಇರುವ ಹುದ್ದೆಗಳ ಪೈಕಿ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರು, ಮಕ್ಕಳ ತಜ್ಞರು ಮತ್ತು ಅರವಳಿಕೆ ತಜ್ಞರುಗಳನ್ನು ಹೊರತುಪಡಿಸಿ ಉಳಿದ ತಜ್ಞತೆಯ ಹುದ್ದೆಗಳನ್ನು ಶೇಕಡ 50ಕ್ಕಿಂತ ಹೆಚ್ಚು ಇದ್ದಲ್ಲಿ ಭರ್ತಿ ಮಾಡಲು ಅವಕಾಶವಿರುವುದಿಲ್ಲ.

ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು (ವೈದ್ಯಾಧಿಕಾರಿಗಳು ಮತ್ತು ಇತರೆ ಸಿಬ್ಬಂದಿಗಳ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ ನಿಯಮಗಳು 2012) ಸರ್ಕಾರಿ ಆದೇಶ ಸಂಖ್ಯೆ:ಆಕುಕ 332 ಹೆಚ್ಎಸ್ಹೆಚ್ 2012 ದಿನಾಂಕ: 19/02/2013ರ ನಿಯಮ 2ರ ಪ್ರಕಾರ ಖಾಲಿ ಇರುವ ಹುದ್ದೆಗಳನ್ನು ಇಲಾಖಾ ಅಂತರ್ಜಾಲದಲ್ಲಿ ಪ್ರಚುರ ಪಡಿಸಿ ವರ್ಗಾವಣೆ ಸಮಯದಲ್ಲಿ ತುಂಬಲಾಗುವುದು.

ಆದುದರಿಂದ ಯಾವುದೇ ಹುದ್ದೆಗಳನ್ನು ಬ್ಲಾಕ್ ಮಾಡುವುದಾಗಲಿ ಅಥವಾ ಮುಚ್ಚಿಡುವುದಾಗಲಿ ಮಾಡಿರುವುದಿಲ್ಲ. ಸದರಿ ಆಸ್ಪತ್ರೆಯಲ್ಲಿ ಈ ಸಾಲಿನ ವರ್ಗಾವಣೆಯಲ್ಲಿ ನಾಲ್ಕು ತಜ್ಞ ವೈದ್ಯರ ಹುದ್ದೆ ಖಾಲಿಯಾಗಿರುವುದರಿಂದ ಈಗ ಕಾರ್ಯನಿರ್ವಹಿಸುತ್ತಿರುವ ತಜ್ಞ ಹುದ್ದೆಗಳು ಶೇಕಡ 50ಕ್ಕಿಂತ ಕಡಿಮೆಯಾಗಿರುವುದರಿಂದ ಕ್ರಿಟಿಕಲ್ ಎಂದು ಪರಿಗಣಿಸಿ, ಮುಂದಿನ ಕೌನ್ಸಿಲಿಂಗ್‌ನಲ್ಲಿ ಈ ಹುದ್ದೆಗಳನ್ನು ಅಂತರ್ ಜಾಲದಲ್ಲಿ ಪ್ರಚುರಪಡಿಸಿ ಕೌನ್ಸಿಲಿಂಗ್ ಮುಖಾಂತರ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಎನ್. ಚಲುವರಾಯಸ್ವಾಮಿ:– ಮಾನ್ಯ ಅಧ್ಯಕ್ಷರೆ, ನನ್ನ ತಾಲ್ಲೂಕಿನ ಆಸ್ಪತ್ರೆಯಲ್ಲಿ 11+2 Dentist ಸೇರಿ ಒಟ್ಟು 13 ಜನ ಡಾಕ್ಟರ್‌ಗಳು ಇದ್ದಾರೆ.

ಅಧ್ಯಕ್ಷರು:– ಮಾನ್ಯ ಚಲುವರಾಯಸ್ವಾಮಿಯವರೆ, ನಿನ್ನೆ ದಿನ ಈ ವಿಷಯದ ಬಗ್ಗೆ ಪ್ರಸ್ತಾಪವಾದಾಗ ಒಟ್ಟಾರೆಯಾಗಿ ಈ ವಿಷಯವನ್ನು ತೆಗೆದುಕೊಂಡು ಮಾತನಾಡೋಣ ಎಂದು ಆಗಿದೆ.

ಶ್ರೀ ಎನ್. ಚಲುವರಾಯಸ್ವಾಮಿ:– ನಾನು ಒಂದೇ ಒಂದು ಸೆಕೆಂಡ್ ಮಾತನಾಡಿಬಿಡುತ್ತೇನೆ. ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ನಾವು ಈಗಾಗಲೇ ಉತ್ತರವನ್ನು ಸಹ ಕೊಟ್ಟಿದ್ದೇನೆ.

ಶ್ರೀ ಎನ್. ಚಲುವರಾಯಸ್ವಾಮಿ:– ತಾವು ಉತ್ತರವನ್ನು ಕೊಟ್ಟಿದ್ದೀರಿ ತಾವು ದಯಮಾಡಿ ಕುಳಿತುಕೊಳ್ಳಿ. ತಾವು ದಯವಿಟ್ಟು ನಿಮ್ಮ ಅಧಿಕಾರಿಗಳಿಗೆ ಯಾವ ತರಹ ಬುದ್ಧಿ ಹೇಳುತ್ತೀರೋ ಗೊತ್ತಿಲ್ಲ. ಯಾರೋ ಒಬ್ಬನಿಗೆ ಊಟ ಕೊಡುವುದಕ್ಕಾಗಿ ಒಬ್ಬನಿಗೆ ಹಸಿದುಕೊಂಡು ಇರುವಂತೆ ಹೇಳುವುದಲ್ಲಾ ಸ್ವಾಮಿ! ನನ್ನ ಆಸ್ಪತ್ರೆಯಲ್ಲಿರುವಂತಹ 4 ಜನ ಡಾಕ್ಟರ್‌ಗಳನ್ನು ಕೌನ್ಸಿಲಿಂಗ್‌ಗೆಂದು ವರ್ಗಾವಣೆ ಮಾಡಿದ್ದಾರೆ. ಅಲ್ಲಿಗೆ ಪ್ರತಿದಿನ 400 ಜನ outpatients ಬರುತ್ತಿದ್ದಾರೆ. ಅಲ್ಲಿಗೆ 4 ಜನ ಲೇಡಿ ಡಾಕ್ಟರ್‌ಗಳನ್ನು ಬಿಟ್ಟು 5 ಜನರನ್ನು ಕೌನ್ಸಿಲಿಂಗ್ ಮೂಲಕ ನೀವು ಹೊರಗಡೆಗೆ ಹೋಗಿ ಎಂದು instruction ಕೊಟ್ಟು ಕಳುಹಿಸಿದ್ದಾರೆ. ನಾವು 50% maintain ಮಾಡುತ್ತೇವೆ, ಇನ್ನು 50% ಏನೂ ಮಡುವುದಕ್ಕಾಗುವುದಿಲ್ಲವೆಂದು ಅಧಿಕಾರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಈ ರೀತಿ ಮಾಡಿದರೆ ನನ್ನ ತಾಲ್ಲೂಕಿನಲ್ಲಿರುವಂತಹ ಆಸ್ಪತ್ರೆಗಳನ್ನು ಮುಚ್ಚಬೇಕಾಗುತ್ತದೆ. ದಯಮಾಡಿ ಬೀದರ್ ಮತ್ತು ಗುಲ್ಬರ್ಗಾ ಆಸ್ಪತ್ರೆಯಲ್ಲಿ ಡಾಕ್ಟರ್‌ಗಳು ಇಲ್ಲದೆ ಇದ್ದರೆ ನೀವು ನೇಮಕ ಮಾಡಿ ಇನ್ನೊಂದು ತರಹದಲ್ಲಿ ಅಲ್ಲಿಗೆ ಕೊಡಿ. ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಮಾಡುವುದನ್ನು ರದ್ದು ಮಾಡಬೇಕು.

(ಗೊಂದಲ)

ಶ್ರೀ ಎನ್. ಚಲುವರಾಯಸ್ವಾಮಿ:– ಮಾನ್ಯ ಸಚಿವರೆ, ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಕೊಟ್ಟಿದ್ದಿರಲ್ಲಾ, ಅಲ್ಲಿಗೆ ಬೇರೆಯವರನ್ನು ಹಾಕಿ ನಂತರ ವರ್ಗಾವಣೆ ಮಾಡಿ.

ಅಧ್ಯಕ್ಷರು:– ಮಾನ್ಯ ಚಲುವರಾಯಸ್ವಾಮಿಯವರೆ, ತಾವು ಕೌನ್ಸಿಲಿಂಗ್ ಪದ್ಧತಿಯನ್ನು ತೆಗೆಯಬೇಕೆಂದು ಹೇಳುತ್ತೀದ್ದೀರಿ.

ಶ್ರೀ ವೈ.ಎಸ್.ವಿ. ದತ್ತ:– ಇದರ ಜೊತೆಯಲ್ಲಿ ಖಾಲಿ ಹುದ್ದೆಗಳನ್ನು ತುಂಬುವಂತಹ ಕೆಲಸವನ್ನು ಸಹ ಮಾಡಬೇಕು.

ಅಧ್ಯಕ್ಷರು:– ಆಯಿತು.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ವೈದ್ಯಾಧಿಕಾರಿ ಸಿಬ್ಬಂದಿಗಳ ವರ್ಗಾವಣೆ ಮತ್ತು ನಿಯಂತ್ರಣ ಕಾನೂನು 2012ರಲ್ಲಿ ಜಾರಿಗೆ ಬಂದಿದೆ. ನೀವು ಹೇಳಿದಂತೆ ಏಕಾಏಕಿ ತಕ್ಷಣ ತೆಗೆಯುವುದಕ್ಕೆ ಬರುವುದಿಲ್ಲ. ಇಡೀ ಸದನದಲ್ಲಿ ಕುಳಿತು ವ್ಯವಸ್ಥೆಯನ್ನು ಬದಲಾವಣೆ ಮಾಡಬೇಕಾಗುತ್ತದೆ. ಇಲ್ಲಿ ನಮಗೆ ತೊಂದರೆ ಇರುವುದು, ಪದೇಪದೇ ಆರೋಗ್ಯ ಇಲಾಖೆಯ ವಿಚಾರ ಬಂದಾಗ ಈ ಬಗ್ಗೆ ವ್ಯಾಪಕವಾಗಿ ಚರ್ಚೆ ಆಗಿ ಈ ಬಗ್ಗೆ ತಾವು ಕೂಡ ಧ್ವನಿಯನ್ನು ಕೂಡಿಸಿದ್ದೀರಿ. ನಮಗೆ ಈ ಬಗ್ಗೆ ಮಾರ್ಗದರ್ಶನವನ್ನು ಸಹ ಕೊಡುತ್ತಿದ್ದೀರಿ. ಇಲ್ಲಿ ಬಂದಿರುವುದೇನೆಂದರೆ ತಾವು ಅನೇಕ ಪರಿಹಾರ ಕಾರ್ಯಕ್ರಮಗಳನ್ನು ಹೇಳಿದ್ದೀರಿ. ಆ ಕ್ರಮಗಳನ್ನು ನಾವು ಅನುಸರಿಸುತ್ತೇವೆ. ಆದರೆ ನಮಗೆ ಬಂದಿರುವುದು, critical vacancies ಎಂದು ಮಾಡಿ ನಾವು ಉತ್ತರ ಕರ್ನಾಟಕದ ಕಡೆಗೆ posting ಮಾಡದೆ ಹೋದರೆ ಹೋಗುವುದಕ್ಕೆ ಸಾಧ್ಯವೇ ಇಲ್ಲ. ಅದು ಒಂದು ಕಡೆಯಲ್ಲಿ ಆಗುತ್ತದೆ. ಆದರೆ physical ಆಗಿ ಏನಾಗುತ್ತದೆ ಎಂದರೆ, ಅಲ್ಲಿಗೆ posting ಕೊಟ್ಟರೂ ಸಹ ಹೋಗದೇ ಇರುವಂತಹ ಪ್ರಶ್ನೆಯೂ ಸಹ ಇದೆ. ಆ ಹಿನ್ನೆಲೆಯಲ್ಲಿ ನೀವು ಅವರನ್ನು suspend ಮಾಡಿದರೂ ಸಹ ಪ್ರಯೋಜನವಿಲ್ಲ. ಈ ಹಿನ್ನೆಲೆಯಲ್ಲಿ, ನಾವು

ಎಲ್ಲರ ಭಾವನೆಯನ್ನು ಅರ್ಥಮಾಡಿಕೊಂಡಿದ್ದೇವೆ. ಈ ಬಗ್ಗೆ ಸೂಕ್ತವಾದಂತಹ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ.

ಶ್ರೀ ಎನ್. ಚಲುವರಾಯಸ್ವಾಮಿ:– ನಾನು ನಮ್ಮಲ್ಲಿರುವ problem ಅನ್ನು ಒಂದೇ lineನಲ್ಲಿ ಹೇಳಿಬಿಡುತ್ತೇನೆ. ನಮ್ಮಲ್ಲಿ 5 ಜನ ಡಾಕ್ಟರ್‌ಗಳನ್ನು ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಮಾಡಿ ನೀನು ಹೋಗಲೇಬೇಕೆಂದು ಬಲವಂತವಾಗಿ ಹೆಚ್ಚು ಡಾಕ್ಟರ್ ಇದ್ದಾರೆಂದು ಕಳುಹಿಸಿದ್ದಾರೆ. ಈಗಾಗಲೇ 3 ಜನ ಡಾಕ್ಟರ್ ಹುದ್ದೆಗಳು ಖಾಲಿ ಇದೆ. 9 ಜನ ಡಾಕ್ಟರ್‌ಗಳು duty ಮಾಡುತ್ತಿದ್ದರು. ಆ 9 ಜನರಲ್ಲಿ 4 ಜನರನ್ನು must and should ನೀವು ಕೌನ್ಸಿಲಿಂಗ್‌ಗೆ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ನೀವು ಹೋಗದೆ ಇದ್ದರೆ suspend ಮಾಡುತ್ತೇವೆಂದು ಹೇಳಿ instruction ಕೊಟ್ಟಾಗ ನಿಮ್ಮ ಇಲಾಖೆಯವರು ಅವರನ್ನು ಕೌನ್ಸಿಲಿಂಗ್ ತೆಗೆದುಕೊಂಡಿದ್ದಾರೆ. ಅದನ್ನು block ಮಾಡಿದ್ದಾರೆ. ಮತ್ತೆ ಯಾರೂ ಅಲ್ಲಿಗೆ ಕೌನ್ಸಿಲಿಂಗ್‌ನಲ್ಲಿ ಕೇಳುವ ಹಾಗಿಲ್ಲ. ನನ್ನ ತಾಲ್ಲೂಕಿಗೆ 4 ಜನ ಡಾಕ್ಟರ್ ಸಾಕು ಎಂದು ಹೇಳಿದ್ದಾರೆ.

ಅಧ್ಯಕ್ಷರು:– ಏನು ಮಾಡಬೇಕೆಂದು ಹೇಳಿ.

ಶ್ರೀ ಎನ್. ಚಲುವರಾಯಸ್ವಾಮಿ:– ಬಲವಂತವಾಗಿ ಕೊಟ್ಟಿರುವಂತಹ ಕೌನ್ಸಿಲಿಂಗ್ ಅನ್ನು ಕ್ಯಾನ್ಸಲ್ ಮಾಡಬೇಕು. ಇಲ್ಲವೆಂದರೆ ಅಲ್ಲಿಗೆ ಬೇರೆಯವರನ್ನು ಕೊಟ್ಟುಬಿಟ್ಟು ರಿಲೀವ್ ಮಾಡಬೇಕು.

ಅಧ್ಯಕ್ಷರು:– ಆಯಿತು. ಇಲ್ಲವೆಂದರೆ ನೀವು ಅಲ್ಲಿಗೆ ಹೋಗಿಬಿಡಿ.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ,. ರಿಲೀವ್ ಮಾಡುವುದು ಬೇಡ ಎಂದು ನಿಮ್ಮ ಅಭಿಪ್ರಾಯವಿದೆ. ನಾನು ಒಟ್ಟಾರೆಯಾಗಿ ಹೇಳುತ್ತೇನೆ.

ಅಧ್ಯಕ್ಷರು:– ಎಲ್ಲಾ ಸದಸ್ಯರ ಸಲಹೆಯೂ ಒಂದೇ ಇದೆ. ಈ ಆರೋಗ್ಯ ಇಲಾಖೆಯ ಆಸ್ಪತ್ರೆಗಳ ವ್ಯವಸ್ಥೆಯನ್ನು ಸರಿಪಡಿಸುವುದು ತೀರಾ

ಅಗತ್ಯವಾಗಿದೆ. ಅದಕೋಸ್ಕರ ಎಲ್ಲರೂ ಕುಳಿತುಕೊಂಡು ಚರ್ಚೆ ಮಾಡಿ ಪರೀಶಿಲನೆ ಮಾಡಿ.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ,. ಮಾನ್ಯ ಚಲುವರಾಯಸ್ವಾಮಿಯವರೇ, ನಿಮ್ಮ ಕ್ಷೇತ್ರಕ್ಕೆ ಸೀಮಿತವಾಗಿ ಇರುವ ವಿಚಾರ ಇರುವುದರಿಂದ ಆರೋಗ್ಯ ಸಚಿವರು ಬರುತ್ತಾರೆ ನಾವು ಮತ್ತು ನೀವು ಮೂರು ಜನರು ಕುಳಿತುಕೊಂಡು ಒಂದು ಪರಿಹಾರವನ್ನು ಕಂಡುಹಿಡಿಯೋಣ.

ಅಧ್ಯಕ್ಷರು:– O.K. ಶ್ರೀ ಕೆ.ಎಸ್. ಮಂಜುನಾಥನಗೌಡರವರೆ, ತಾವು ಗಮನ ಸೆಳೆಯಿರಿ.